# 2024 ಮಾರ್ಚ್ 25 ರಂದು ನಡೆದ ಎಸ್ ಎಸ್ ಎಲ್ ಸಿ
# ವಾರ್ಷಿಕ ಪರೀಕ್ಷೆ – 1 ರ ಮಾದರಿ ಉತ್ತರಗಳು

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಪರ್ಯಾಯ ಆಯ್ಕೆಗಳನ್ನು ಕೊಡಲಾಗಿದೆ. ಅವುಗಳಲ್ಲಿ ಹೆಚ್ಚು ಸೂಕ್ತವಾದ ಉತ್ತರವನ್ನು ಆರಿಸಿ, ಕ್ರಮಾಕ್ಷರದೊಂದಿಗೆ ಬರೆಯಿರಿ.** **6 x 1 = 6**

**1. ಕನ್ನಡ ವರ್ಣಮಾಲೆಯಲ್ಲಿರುವ ಮಹಾಪ್ರಾಣಾಕ್ಷರಗಳ ಸಂಖ್ಯೆ :** **ಜ್ಞಾನದೀಪ ಪುಟಸಂಖ್ಯೆ 168**

(ಎ) 05 (ಬಿ) 07

(ಸಿ) 13 (ಡಿ) 10

**ಉತ್ತರ : (ಡಿ) 10**

**2. 'ವಾಗ್ದೇವಿ' ಪದವು ಈ ಸಂಧಿಗೆ ಉದಾಹರಣೆಯಾಗಿದೆ :** **ಜ್ಞಾನದೀಪ ಪುಟಸಂಖ್ಯೆ 177**

(ಎ) ಆದೇಶ ಸಂಧಿ (ಬಿ) ಜಶ್ತ್ವ

(ಸಿ) ಶ್ಚುತ್ವ ಸಂಧಿ (ಡಿ) ಅನುನಾಸಿಕ ಸಂಧಿ

**ಉತ್ತರ : (ಬಿ) ಜಶ್ತ್ವ**

**3. ತೃತೀಯಾ ವಿಭಕ್ತಿಯ ಕಾರಕಾರ್ಥ** **ಜ್ಞಾನದೀಪ ಪುಟಸಂಖ್ಯೆ 170**

(ಎ) ಕರಣಾರ್ಥ (ಬಿ) ಕರ್ಮಾರ್ಥ

(ಸಿ) ಸಂಪ್ರದಾನ (ಡಿ) ಸಂಬಂಧ

**ಉತ್ತರ : (ಎ) ಕರಣಾರ್ಥ**

**4. ಅನೇಕ ಉಪವಾಕ್ಯಗಳು ಒಂದು ಪ್ರಧಾನ ವಾಕ್ಯಕ್ಕೆ ಅಧೀನವಾಗಿದ್ದಾಗ ಉಪವಾಕ್ಯಗಳು ಮುಗಿದಾಗಲೆಲ್ಲ ಈ ಚಿಹ್ನೆಯನ್ನು ಬಳಸಲಾಗುವುದು :** **ಜ್ಞಾನದೀಪ ಪುಟಸಂಖ್ಯೆ 189**

(ಎ) ಉದ್ಧರಣ (ಬಿ) ವಾಕ್ಯವೇಷ್ಟನ

(ಸಿ) ಅರ್ಧವಿರಾಮ (ಡಿ) ಪೂರ್ಣವಿರಾಮ

**ಉತ್ತರ : (ಸಿ) ಅರ್ಧವಿರಾಮ**

**5. 'ಕೊರೆತ' ಪದ ಈ ವ್ಯಾಕರಣಾಂಶಕ್ಕೆ ಸೇರಿದೆ :** **ಜ್ಞಾನದೀಪ ಪುಟಸಂಖ್ಯೆ 188**

(ಎ) ಕೃದಂತನಾಮ (ಬಿ) ಕೃದಂತ ಭಾವನಾಮ

(ಸಿ) ಕೃದಂತಾವ್ಯಯ (ಡಿ) ತದ್ಧಿತಾಂತ ಭಾವನಾಮ

**ಉತ್ತರ : (ಬಿ) ಕೃದಂತ ಭಾವನಾಮ**

**6. 'ಕಣ್ದೆರೆ' ಪದವು ಈ ಸಮಾಸಕ್ಕೆ ಉದಾಹರಣೆಯಾಗಿದೆ.** **ಜ್ಞಾನದೀಪ ಪುಟಸಂಖ್ಯೆ 180**

(ಎ) ಅಂಶಿ ಸಮಾಸ (ಬಿ) ಕರ್ಮಧಾರಯ ಸಮಾಸ

(ಸಿ) ಕ್ರಿಯಾ ಸಮಾಸ (ಡಿ) ಪೂರ್ಣವಿರಾಮ

**ಉತ್ತರ : (ಸಿ) ಕ್ರಿಯಾ ಸಮಾಸ**

**II. ಕೆಳಗಿನ ಪ್ರಶ್ನೆಗಳಿಗೆ ಮೊದಲೆರಡು ಪದಗಳಿಗೆ ಇರುವ ಸಂಬಂಧದಂತೆ ಮೂರನೆಯ ಪದಕ್ಕೆ ಸರಿಹೊಂದುವ ಸಂಬಂಧೀ ಪದವನ್ನು ಬರೆಯಿರಿ.** **4 x 1 = 4**

**7.** ಹಲವು : ಪರಿಮಾಣವಾಚಕ : : ತೆಂಕಣ : **ದಿಗ್ವಾಚಕ** **ಜ್ಞಾನದೀಪ ಪುಟಸಂಖ್ಯೆ 170**

**8.** ಕೋಕಿಲಾ : ಕೋಗಿಲೆ : : ವರ್ಣ : **ಬಣ್ಣ** **ಜ್ಞಾನದೀಪ ಪುಟಸಂಖ್ಯೆ 183**

**9.** ಜನಕಾ : ಜನಕ್ಕೆ : : ಇಸವಾಸ : **ವಿಶ್ವಾಸ** **ಜ್ಞಾನದೀಪ ಪುಟಸಂಖ್ಯೆ 184**

**10.** ಕೆನೆಮೊಸರು : ಜೋಡುನುಡಿ : : ಸಾಕುಸಾಕು : **ದ್ವಿರುಕ್ತಿ** **ಜ್ಞಾನದೀಪ ಪುಟಸಂಖ್ಯೆ 184**

**III. ಕೆಳಗಿನ ಪ್ರಶ್ನೆಗಳಿಗೆ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ.** **7 x 1 = 7**

**11. ಆಂಗ್ಲ ಸಾಮ್ರಾಜ್ಯದ ವೈಭವ ಕಂಡು ಬರುವ ಓಣಿ ಯಾವುದು?** **ಜ್ಞಾನದೀಪ ಪುಟಸಂಖ್ಯೆ 16**

**ಉತ್ತರ:–** ಆಂಗ್ಲ ಸಾಮ್ರಾಜ್ಯದ ವೈಭವ ಕಂಡುಬರುವ ಓಣಿ ಲಂಡನ್ ನಗರದ **'ಚೇರಿಂಗ್ ಕ್ರಾಸ್'.**

**12. ಬೆಳ್ಗೊಡೆಯ ಅಡಿಯಲ್ಲಿ ಯಾವುದು ಕಾಣುವುದಿಲ್ಲ?** **ಜ್ಞಾನದೀಪ ಪುಟಸಂಖ್ಯೆ 26**

**ಉತ್ತರ:** ಬೆಳ್ಗೊಡೆಯ ಅಡಿಯಲ್ಲಿ **ಪರಲೋಕ** ಕಾಣುವುದಿಲ್ಲ.

13. ಏಷ್ಯಾಖಂಡದಲ್ಲಿಯೇ ಮೊದಲು ಪ್ರಾರಂಭಿಸಿದ ಜಲ ವಿದ್ಯುತ್ ಯೋಜನೆ ಯಾವುದು? **ಪುಟಸಂಖ್ಯೆ 37**

**ಉತ್ತರ:– ಶಿವನಸಮುದ್ರದ ಕಾವೇರಿ ನದಿಯ ಬಳಿಯಲ್ಲಿ ಸ್ಥಾಪಿಸಿದ** ಜಲ ವಿದ್ಯುತ್ ಉತ್ಪಾದನಾ ಕೇಂದ್ರ

14. ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು ಹೇಗೆ ಕಳೆದನು? **ಜ್ಞಾನದೀಪ ಪುಟಸಂಖ್ಯೆ 65**

**ಉತ್ತರ:–** ಧರ್ಮಬುದ್ಧಿಯು ತನ್ನ ಬೆಳಗಿನ ಹೊತ್ತನ್ನು **ದೇವರು, ಗುರುಗಳು, ವೇದಾಧ್ಯಯನ ನಿರತನಾಗಿ** ಪೂಜೆ ಮಾಡುತ್ತಾ ಕಳೆದನು.

**15. ಕವಿ ಜಿ.ಎಸ್.ಶಿವರುದ್ರಪ್ಪನವರು ಯಾವ ಎಚ್ಚರದೊಳು ಬದುಕಬೇಕಿದೆ ಎಂದು ಹೇಳಿದ್ದಾರೆ?** **ಪುಟಸಂಖ್ಯೆ 73**

**ಉತ್ತರ:– ಮತಗಳೆಲ್ಲವೂ ಪಥಗಳು ಎನ್ನುವ ಹೊಸ** ಎಚ್ಚರದಲ್ಲಿ ಬದುಕಬೇಕಾಗಿದೆ.

**16. ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು ಹೇಗೆ ಕಂಡಿದೆ?** ಜ್ಞಾನದೀಪ ಪುಟಸಂಖ್ಯೆ 112

**ಉತ್ತರ:–** ಕವಿ ಕುವೆಂಪು ಅವರಿಗೆ ಹುಲ್ಲಿನ ಹಾಸು **ಮಕಮಲ್ಲಿನ ಹೊಸಪಚ್ಚೆಯ ಜಮಖಾನದಂತೆ** ಕಂಡಿದೆ.

17. 'ಬಿಲ್ಲಹಬ್ಬ' ವನ್ನು ರಚಿಸಿದ ಕವಿ ಯಾರು? ಜ್ಞಾನದೀಪ ಪುಟಸಂಖ್ಯೆ 165

ಉತ್ತರ : 'ಬಿಲ್ಲಹಬ್ಬ' ವನ್ನು ರಚಿಸಿದ ಕವಿ **ಮೂಲ್ಕಿಯ ವಾಸುದೇವ ಪ್ರಭು.**

**IV. ಕೆಳಗಿನ ಪ್ರಶ್ನೆಗಳಿಗೆ ಮೂರು – ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 10 x 2 = 20**

18. **ಟೊಪ್ಪಿಗೆಯ ವಿಶೇಷತೆಯನ್ನು ಲೇಖಕರು ಹೇಗೆ ದಾಖಲಿಸಿದ್ದಾರೆ?** ಜ್ಞಾನದೀಪ ಪುಟಸಂಖ್ಯೆ 17

**ಉತ್ತರ:**– ಲೇಖಕರು ಲಂಡನ್ ನಗರದಲ್ಲಿ ಹೆಣ್ಣುಮಕ್ಕಳು ಧರಿಸಿರುವ ಟೊಪ್ಪಿಗೆಯನ್ನು ಬಹುಕುತೂಹಲದಿಂದ ನೋಡುತ್ತಾರೆ ಒಂದು ಟೊಪ್ಪಿಗೆಯಂತೆ ಇನ್ನೊಂದು ಇರುವುದಿಲ್ಲ. ಸಿಕ್ಕಿಸಿದ ಕುಚ್ಚವಾದರೂ ಕನಿಷ್ಠ ಪಕ್ಷಕ್ಕೆ ಬೇರೆಯಾಗಿರುತ್ತದೆ! ಕೋಟ್ಯವಧಿ ಟೊಪ್ಪಿಗೆಗಳನ್ನು ಬೇಕಾದರೆ ಪರೀಕ್ಷಿಸಿ ಮನಗಾಣಬಹುದು. ಮನುಷ್ಯನಂತೆ ಟೊಪ್ಪಿಗೆಯಲ್ಲವೆ? ಒಬ್ಬ ಮನುಷ್ಯಳಂತೆ ಇನ್ನೊಬ್ಬಳಿಲ್ಲ ಎಂಬುದು ಲೇಖಕರ ಅಭಿಪ್ರಾಯವಾಗಿದೆ.

19. **ನೆಹರು ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಕುರಿತು ಹೇಳಿದ ಮಾತುಗಳಾವುವು?**

**ಉತ್ತರ:**– ನೆಹರು ಅವರು ಸರ್. ಎಂ. ವಿಶ್ವೇಶ್ವರಯ್ಯ ಅವರ ಶತಮಾನೋತ್ಸವ ಸಮಾರಂಭದಲ್ಲಿ ವಿಶ್ವೇಶ್ವರಯ್ಯಅವರನ್ನು ಕುರಿತು "ದುರದೃಷ್ಟವಶಾತ್ ಭಾರತೀಯರಾದ ನಾವು ಹೆಚ್ಚು ಮಾತನಾಡುವವರು ಮತ್ತು ನುಡಿದಂತೆ ನಡೆಯಲಾರದವರು ಎಂಬ ದೂಷಣೆಗೆ ಒಳಗಾಗಿದ್ದೇವೆ. ತಾವು ಈ ಮಾತಿಗೆ ಬಹು ದೊಡ್ಡ ರೀತಿಯಲ್ಲಿ ಹೊರತಾಗಿದ್ದೀರಿ. ತಾವು ಕಡಿಮೆ ಮಾತನಾಡಿದ್ದೀರಿ; ಹೆಚ್ಚು ಕೆಲಸ ಮಾಡಿದ್ದೀರಿ. ಅದನ್ನು ನಾವು ತಮ್ಮಿಂದ ಕಲಿಯೋಣ" ಎಂದು ಹೇಳಿದ್ದಾರೆ. ಜ್ಞಾನದೀಪ ಪುಟಸಂಖ್ಯೆ 39

20. **ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯನವರ ಅಭಿಪ್ರಾಯವೇನು? ತಿಳಿಸಿ.**

**ಉತ್ತರ:**– ಶಿಕ್ಷಣದ ಬಗ್ಗೆ ವಿಶ್ವೇಶ್ವರಯ್ಯ ಅವರು "ಆಧುನಿಕ ಶಿಕ್ಷಣವೇ ಎಲ್ಲ ಸಮಸ್ಯೆಗಳಿಗೂ ಪರಮೋಚ್ಚ ಪರಿಹಾರ. ಶಿಕ್ಷಣಕ್ಕಾಗಿ ಶಿಕ್ಷಣವಿರಬೇಕು. ಅದು ಕೆಲವೇ ಜನರ ಸ್ವತ್ತಾಗದೆ ಪ್ರಗತಿಪರ ರಾಜ್ಯದಲ್ಲಿ ಎಲ್ಲರ ಆ ಜನ್ಮಸಿದ್ಧ ಹಕ್ಕಾಗಬೇಕು" ಎಂದು ಹೇಳಿದ್ದಾರೆ. ಜ್ಞಾನದೀಪ ಪುಟಸಂಖ್ಯೆ 39

21. **ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ ಮೂಡಿದ ಪ್ರಶ್ನೆಗಳಾವುವು?**

**ಉತ್ತರ:**– ಮಹಿಳೆಯ ಆರ್ತನಾದ ಕೇಳಿ ರಾಹಿಲನ ಮನದಲ್ಲಿ "ಆ ಮಹಿಳೆ ಯಾವ ರೀತಿಯ ಅಪಾಯದಲ್ಲಿ ಸಿಲುಕಿದ್ದಾಳೆ? ಆ ಮನೆಯೊಳಗೆ ಏನು ಸಂಭವಿಸುತ್ತಿದೆ? ತಾನೀಗ ಈ ಕದವನ್ನು ತಟ್ಟಿದರೆ ಪರಿಣಾಮವೇನಾಗಬಹುದು? ಬ್ಲಾಕ್ ಔಟ್ ನಿಯಮ ಪಾಲಿಸುವ ಈ ಸಮಯದಲ್ಲಿ ಆ ಮನೆಯೊಳಗೆ ಯಾವ ರೀತಿಯ ಕ್ರೌರ್ಯ ನಡೆಯುತ್ತಿದೆ? ಎಂಬ ಪ್ರಶ್ನೆಗಳು ಮೂಡಿದವು. ಜ್ಞಾನದೀಪ ಪುಟಸಂಖ್ಯೆ 57

22. **ಹೊಸ ಭರವಸೆಗಳನ್ನು ಮೂಡಿಸಿ ಯಾವುದರ ನಡುವೆ ಸೇತುವೆಯಾಗಬೇಕೆಂದು ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ?**

**ಉತ್ತರ:**– ಭಾಷೆ, ಜಾತಿ, ಮತಧರ್ಮಗಳ ಭೇಧ ಭಾವದಿಂದ ಮನುಜರ ನಡುವೆ ಅಡ್ಡಗೋಡೆಗಳು ನಿರ್ಮಾಣವಾಗಿವೆ. ಸ್ನೇಹ, ಪ್ರೀತಿ, ನಂಬಿಕೆಯ ಮೂಲಕ ಮನುಜರ ನಡುವಿನ ಈ ಅಡ್ಡಗೋಡೆಗಳನ್ನು ಕೆಡವಬೇಕು. ಬದುಕಿನಲ್ಲಿ ಹೊಸ ಬರವಸೆಗಳನ್ನು ಮೂಡಿಸಿ ಮನುಜರ ನಡುವೆ ಸೇತುವೆಯಾಗಬೇಕೆಂದು ಜಿ.ಎಸ್.ಶಿವರುದ್ರಪ್ಪನವರು ಹೇಳಿದ್ದಾರೆ. ಜ್ಞಾನದೀಪ ಪುಟಸಂಖ್ಯೆ 74

**23. ಕೃಷ್ಣನು ಕೌರವೇಂದ್ರನನ್ನು ಕೊಂದನು ಎಂದು ಕರ್ಣ ಹೇಳಲು ಕಾರಣವೇನು?**

**ಉತ್ತರ:–** ಕರ್ಣನು ಕೃಷ್ಣನಿಗೆ "ನಾನು ರಾಜ್ಯದ ಸಿರಿಸಂಪತ್ತಿಗೆ ಸೋಲುವವನಲ್ಲ. ಪಾಂಡವರು, ಕೌರವರು ಸೇವೆಯನ್ನು ಮಾಡುವುದು ನನಗೆ ಇಷ್ಟವಿಲ್ಲ. ಆದರೆ ನನ್ನನ್ನು ಕಾಪಾಡಿದ ಒಡೆಯನಾದ ದುರ್ಯೋಧನನಿಗೆ ಶತ್ರುಗಳ ಶಿರವನ್ನು ಕಡಿದು ತಂದು ಒಪ್ಪಿಸುವ ಆವೇಶದಲ್ಲಿ ಇದ್ದೆನು. ಆದರೆ ನೀನು ನನ್ನ ಜನ್ಮ ರಹಸ್ಯವನ್ನು ತಿಳಿಸಿ ದುರ್ಯೋಧನನನ್ನೂ ಕೊಂದೆ" ಎಂದನು. **ಜ್ಞಾನದೀಪ ಪುಟಸಂಖ್ಯೆ 105**

**24. ಬಾಳಿನಲ್ಲಿ ತೃಪ್ತಿ ದೊರಕಬೇಕಾದರೆ ಏನು ಮಾಡಬೇಕೆಂಬುದು ವಿವೇಕಾನಂದರ ಅಭಿಪ್ರಾಯವಾಗಿದೆ?**

ಉತ್ತರ : ದೇಶದ ಮತ್ತು ಇಡಿಯ ಜಗತ್ತಿನ ಕಲ್ಯಾಣ ನಮ್ಮ ಮೇಲೆ ನಿಂತಿದೆ ಎಂದು ಭಾವಿಸಿ ಕಾರ್ಯೋನ್ಮುಖರಾಗಿರಬೇಕು. ವೇದಾಂತದ ಸಂದೇಶವನ್ನು ಪ್ರತಿ ಮನೆಗೂ ಸಾರಬೇಕು. ಪ್ರತಿಯೊಂದು ಆತ್ಮದಲ್ಲಿರುವ ಸುಪ್ತ ಪಾವಿತ್ರ್ಯವನ್ನು ಜಾಗೃತಗೊಳಿಸಿ ಒಂದು ಮಹಾ ಆದರ್ಶಕ್ಕಾಗಿ ಬಾಳಿ ದುಡಿದು ಮಡಿದಾಗ ಬಾಳಿನಲ್ಲಿ ತೃಪ್ತಿ ದೊರಕುತ್ತದೆ ಎಂಬುದು ಸ್ವಾಮಿ ವಿವೇಕಾನಂದರ ಅಭಿಪ್ರಾಯವಾಗಿದೆ. **ಜ್ಞಾನದೀಪ ಪುಟಸಂಖ್ಯೆ 57**

**25. ಭಗತ್ ಸಿಂಗ್ ಹೇಗೆ ಅಮರನಾದನು?** **ಜ್ಞಾನದೀಪ ಪುಟಸಂಖ್ಯೆ 153**

**ಉತ್ತರ:** ಭಗತ್‌ಸಿಂಗ್ ಜಲಿಯನ್ ವಾಲಾಬಾಗಿನ ಘಟನೆಯಿಂದ ಆಕ್ರೋಶಿತನಾಗಿ ಕ್ರಾಂತಿಕಾರಿ ಗುಂಪಿನ ಸಹಾಯದಿಂದ ಬ್ರಿಟಿಷ್ ಸರ್ಕಾರದ ವಿರುದ್ಧ ತನ್ನ ಸೇಡನ್ನು ತೀರಿಸಿಕೊಳ್ಳುತ್ತಾನೆ. ಇದರ ಫಲವಾಗಿ ತನ್ನ ಸಹಚರರಾದ ಸುಖ್‌ದೇವ್, ರಾಜ್‌ಗುರು, ಭಟುಕೇಶ್ವರ ದತ್ತರೊಂದಿಗೆ ಮರಣ ದಂಡನೆಗೆ ಈಡಾಗಿ ಹಸನ್ಮುಖಿಯಾಗಿ ತಾಯಿ ಭಾರತಾಂಬೆಯ ಸ್ವಾತಂತ್ರ್ಯದ ಹಣತೆಗೆ ತೈಲವೆಂಬಂತೆ ವೀರಯೋಧನಾಗಿ, ಸ್ವಾತಂತ್ರ್ಯಕ್ಕೋಸ್ಕರ ತನ್ನ ಜೀವನವನ್ನೇ ಅರ್ಪಿಸಿ ಮರಣದಂಡನೆಗೆ ಈಡಾಗಿ, ಸ್ವಾತಂತ್ರ್ಯ ಹೋರಾಟಕ್ಕೆ ಸ್ಪಷ್ಟವಾದ ಗುರಿ ತೋರಿಸಿಕೊಟ್ಟು ತನ್ನ ತ್ಯಾಗ ಬಲಿದಾನದಿಂದ ಅಮರನಾದನು.

**26. ವಸಂತ ಮುಖ ತೋರಲಿಲ್ಲ ಕವನದಲ್ಲಿ ಪ್ರಕೃತಿಯ ಸಂಭ್ರಮ ಹೇಗೆ ವ್ಯಕ್ತವಾಗಿದೆ?**

**ಉತ್ತರ:** ಒಡೆಯನ ಮನೆಯ ಅಂಗಳದಲ್ಲಿ ಮಾವಿನ ಮರಗಳು ಹಚ್ಚಹಸುರಾಗಿ ಮೈ ತುಂಬಿ ನಿಂತವೆ. ಆ ಪ್ರಕೃತಿಯ ಮಡಿಲಲ್ಲಿ ಹಕ್ಕಿಗಳು ರೆಕ್ಕೆ ಬಿಚ್ಚಿ ಹಾರುತ್ತಿವೆ. ಪ್ರಕೃತಿಯ ಸೊಬಗನ್ನು ಕೋಗಿಲೆಗಳು ಮನ ದುಂಬಿ ಹಾಡುತ್ತಿವೆ. ಈ ಭೂಮಿಗೆ ಕಡಲು ಉಕ್ಕಿ ಹರಿಯುವ ಸಂಭ್ರಮ ವ್ಯಕ್ತವಾಗಿದೆ. ಜ್ಞಾನದೀಪ ಪುಟಸಂಖ್ಯೆ 156

**27. ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಹೇಗೆ ಪರಿಹರಿಸಿಕೊಳ್ಳಲಾಯಿತು?**

**ಉತ್ತರ**: ಪಶ್ಚಿಮ ಘಟ್ಟದ ಕಾಡುಗಳಲ್ಲಿ ತೊಡಕಲುಕುಡಿ ಎಂಬ ಬೂದು ಬಣ್ಣದ ಗಿಡದ ಎಳೆಯ ಕುಡಿ ಸಂಗ್ರಹಿಸಿ, ಒಣಗಿಸಿ ಡಬ್ಬದಲ್ಲಿ ಶೇಖರಿಸಿಡಲಾಗುತ್ತಿತ್ತು. ಒಣಗಿದ ಕುಡಿಯನ್ನು ಎಣ್ಣೆಯನ್ನು ಅದ್ದಿ ನಿತ್ಯ ಆರತಿಗೆ ಬಳಸಲಾಗುತ್ತಿತ್ತು. ಇದು ಎಣ್ಣೆಯನ್ನು ಹತ್ತಿಯಂತೆ ಹೀರಿಕೊಂಡು ದೀಪ ಉರಿಯಲು ಸಹಾಯಕವಾಗಿತ್ತು. ನಾಗಸಂಪಿಗೆ ಬೀಜಗಳನ್ನು ಕುಟ್ಟಿ ಚಿಕ್ಕ ಚಿಕ್ಕ ಉಂಡೆಗಳನ್ನು ಕಟ್ಟಿ ಉರಿಸಲಾಗುತ್ತಿತ್ತು. ಇದಲ್ಲದೆ ಅಡಿಕೆ ತೋಟಗಳಂಚಿನಲ್ಲಿ ಬೆಳೆಯುತ್ತಿದ್ದ ಜವಾರಿ ಹತ್ತಿ ಗಿಡಗಳ ಹತ್ತಿಯನ್ನು ದೀಪಕ್ಕೆ ಬಳಸುವ ಮೂಲಕ ಮಲೆನಾಡಿನಲ್ಲಿ ದೀಪದ ಬತ್ತಿಯ ಸಮಸ್ಯೆಯನ್ನು ಪರಿಹರಿಸಿಕೊಳ್ಳಲಾಯಿತು. **ಪುಟಸಂಖ್ಯೆ 160**

**V. ಸಾಹಿತಿಗಳ ಸ್ಥಳ, ಕಾಲ, ಕೃತಿ ಮತ್ತು ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ.  2 x 3 = 6**

**28. ಸಾರಾ ಅಬೂಬಕ್ಕರ್**  **ಜ್ಞಾನದೀಪ ಪುಟಸಂಖ್ಯೆ 52**

**ಶ್ರೀಮತಿ ಸಾರಾ ಅಬೂಬಕ್ಕರ್ ಅವರು** ಕ್ರಿ.ಶ. 1936 ರಲ್ಲಿ ಕಾಸರಗೋಡಿನಲ್ಲಿ **ಜನಿಸಿದರು. ಕನ್ನಡ ನಾಡಿನ ಪ್ರಸಿದ್ಧ ಕಥೆಗಾರ್ತಿ ಹಾಗೂ ಕಾದಂಬರಿಗಾರ್ತಿಯಾಗಿ ಜನಪ್ರಿಯರಾಗಿದ್ದಾರೆ.** ಇವರು ಚಪ್ಪಲಿಗಳು, ಖೆಡ್ಡಾ, ಪಯಣ, ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಎಂಬ ಕಥಾಸಂಕಲನಗಳನ್ನು ಹಾಗೂ ಚಂದ್ರಗಿರಿಯ ತೀರದಲ್ಲಿ, ಕದನ ವಿರಾಮ, ವಜ್ರಗಳು, ಸುಳಿಯಲ್ಲಿ ಸಿಕ್ಕವರು, ತಳ ಒಡೆದ ದೋಣಿಯಲಿ **ಮೊದಲಾದ ಕಾದಂಬರಿಗಳನ್ನು ರಚಿಸಿದ್ದಾರೆ. ಇವರ ಸಾಹಿತ್ಯ ಸೇವೆಗಾಗಿ ಅನೇಕ ಪ್ರಶಸ್ತಿಗಳು ಲಭಿಸಿವೆ.** ಕನ್ನಡ ಸಾಹಿತ್ಯ ಪರಿಷತ್ತಿನ ನೃಪತುಂಗ ಪ್ರಶಸ್ತಿಯೂ **ಸಹ ಇವರಿಗೆ ಲಭಿಸಿದೆ.**

**29. ಕುವೆಂಪು**  **ಜ್ಞಾನದೀಪ ಪುಟಸಂಖ್ಯೆ 110**

**ಕುವೆಂಪು** ಎಂಬ ಕಾವ್ಯನಾಮದಿಂದ ಪ್ರಸಿದ್ದರಾದ ಕುಪ್ಪಳ್ಳಿ ವೆಂಕಟಪ್ಪನವರ ಮಗ ಪುಟ್ಟಪ್ಪ ಅವರು ಕ್ರಿ.ಶ. **1904** ರಲ್ಲಿ ಶಿವಮೊಗ್ಗ ಜಿಲ್ಲೆಯ **ತೀರ್ಥಹಳ್ಳಿ** ತಾಲೂಕಿನ **ಕುಪ್ಪಳ್ಳಿಯಲ್ಲಿ** ಜನಿಸಿದರು. ಇವರು ಮಲೆನಾಡಿನ ಚಿತ್ರಗಳು, ಕೊಳಲು, ಪಾಂಚಜನ್ಯ, ನನ್ನ ದೇವರು ಮತ್ತು ಇತರ ಕಥೆಗಳು, ಕಾನೂರು ಹೆಗ್ಗಡತಿ, ಮಲೆಗಳಲ್ಲಿ ಮದುಮಗಳು, ಜಲಗಾರ, ನೆನಪಿನ ದೋಣಿಯಲ್ಲಿ, **ಶ್ರೀರಾಮಾಯಣ ದರ್ಶನಂ** ಮೊದಲಾದ ಕೃತಿಗಳನ್ನು ರಚಿಸಿದ್ದಾರೆ. ಶ್ರೀಯುತರಿಗೆ ಜ್ಞಾನಪೀಠ ಪ್ರಶಸ್ತಿ, ರಾಷ್ಟ್ರಕವಿ ಪ್ರಶಸ್ತಿ, ಪಂಪ ಪ್ರಶಸ್ತಿ ಹೀಗೆ ಮೊದಲಾದ ಪ್ರಶಸ್ತಿಗಳನ್ನು ಪಡೆದಿದ್ದಾರೆ.

**VI. ಕೆಳಗಿನ ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗಿಸಿ, ಛಂದಸ್ಸಿನ ಹೆಸರನ್ನು ಬರೆಯಿರಿ.  1 x 3 = 3**

**30. ಕೋಗಿಲೆಯಾಗಿ ಪುಟ್ಟುವುದು ನಂದನದೊಳ್ ವನವಾಸಿದೇಶದೊಳ್**

| ಭ | ರ | ನ | ಭ | ಭ | ರ | ಲ ಗು |
|---|---|---|---|---|---|---|
| — ∪∪ | — ∪ — | ∪∪∪ | — ∪∪ | — ∪∪ | — ∪ — | ∪ — |
| ಕೋಗಿಲೆ | ಯಾಗಿಪು | ಟ್ಟುವುದು | ನಂದನ | ದೊಳ್‌ವನ | ವಾಸಿದೇ | ಶದೊಳ್ |

**ಛಂದಸ್ಸು – ಅಕ್ಷರ ಗಣಾಧಾರಿತ ಉತ್ಪಲಮಾಲಾ ವೃತ್ತ**  **ಜ್ಞಾನದೀಪ ಪುಟಸಂಖ್ಯೆ 208**

**VII. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿರಿ.  1 x 3 = 3**

**31. "ಮನೋರಮೆಯ ಹಣೆ ಬಾಲಚಂದ್ರನಂತೆ ಆಕರ್ಷಣೀಯವಾಗಿತ್ತು"**  **ಜ್ಞಾನದೀಪ ಪುಟಸಂಖ್ಯೆ 194**

**ಅಲಂಕಾರ :** ಉಪಮಾ

**ಲಕ್ಷಣ :** ಎರಡು ವಸ್ತುಗಳಿಗಿರುವ ಸಾದೃಶ್ಯ ಸಂಪತ್ತನ್ನು ವರ್ಣಿಸಿ ಹೇಳುವುದು.

**ಉಪಮೇಯ :** ಮನೋರಮೆಯ ಹಣೆ

**ಉಪಮಾನ :** ಬಾಲಚಂದ್ರ

**ವಾಚಕಪದ :** ಅಂತೆ

**ಸಮಾನ ಧರ್ಮ : ಆಕರ್ಷಣೀಯವಾಗಿತ್ತು**

**ಸಮನ್ವಯ :** ಇಲ್ಲಿ ಉಪಮೇಯವಾದ ಮನೋರಮೆಯ ಹಣೆಯನ್ನು ಉಪಮಾನವಾದ ಬಾಲಚಂದ್ರನಿಗೆ ಹೋಲಿಸಲಾಗಿದೆ ಹಾಗಾಗಿ ಇದು ಉಪಮಾ ಅಲಂಕಾರವಾಗಿದೆ.

**VIII. ಈ ಗಾದೆಗಳಲ್ಲಿ ಯಾವುದಾದರೂ ಒಂದನ್ನು ಗಾದೆಯ ಮಹತ್ತ್ವದೊಂದಿಗೆ ವಿಸ್ತರಿಸಿ ಬರೆಯಿರಿ. 1 x 3 = 3**

**32. ಕುಂಬಾರನಿಗೆ ವರುಷ ದೊಣ್ಣೆಗೆ ನಿಮಿಷ** **ಜ್ಞಾನದೀಪ ಪುಟಸಂಖ್ಯೆ 228**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ **'ವೇದ ಸುಳ್ಳಾದರೂ ಗಾದೆ ಸುಳ್ಳಾಗದು'** ಎಂಬ ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ **'ಕಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ'** ಎಂಬ ಗಾದೆಯೂ ಸಹ ಒಂದಾಗಿದೆ.

ಕುಂಬಾರನು ಸೂಕ್ತವಾದ ಮಣ್ಣನ್ನು ಆರಿಸಿ, ತಂದು, ಹದಗೊಳಿಸಿ, ಕಲಸಿ, ಚಕ್ರಕ್ಕೆ ಹಾಕಿ, ತಿರುವಿ, ಬೇಕಾದ ಆಕಾರಗಳಲ್ಲಿ ಸಾವಿರಾರು ಮಡಕೆ–ಕುಡಿಕೆಗಳನ್ನು ತಯಾರಿಸಲು ವರ್ಷಗಟ್ಟಲೆ ಕಾಲವು ಬೇಕಾಗುತ್ತದೆ. ಆದರೆ ಅವಷ್ಟನ್ನು ಒಂದು ಕೋಲಿನಿಂದ ಒಂದೆರಡು ನಿಮಿಷಗಳಲ್ಲಿ ಸುಲಭವಾಗಿ ಒಡೆದುಹಾಕಿಬಿಡಬಹುದು. ಇದೇ ರೀತಿ ಒಂದು ಮನೆ ಕಟ್ಟಲು ವರ್ಷಾನುಗಟ್ಟಲೆ ಸಮಯ ಬೇಕಾಗುತ್ತದೆ. ಅದನ್ನು ಕೆಡುಹಲು ಕೇವಲ ಒಂದೆರಡು ಗಂಟೆಗಳೇ ಸಾಕು. ಮನುಷ್ಯನು ಒಳ್ಳೆಯ ಹೆಸರನ್ನು, ಹಣವನ್ನು, ಖ್ಯಾತಿಯನ್ನು ಸಂಪಾದಿಸಲು ಬದುಕಿನ ಹಲವು ವರ್ಷಗಳು ಶ್ರಮಿಸಬೇಕಾಗುತ್ತದೆ. ಕೆಲವೇ ನಿಮಿಷಗಳ ದುಷ್ಕಾರ್ಯಗಳು ಕಷ್ಟಪಟ್ಟು ಸಂಪಾದಿಸಿದ ಒಳ್ಳೆಯತನವನ್ನು, ಹಣವನ್ನು, ಖ್ಯಾತಿಯನ್ನೆಲ್ಲ ಹಾಳುಮಾಡಿ ಬಿಡುತ್ತವೆ. **'ಕಟ್ಟುವುದು ಕಠಿಣ; ಕೆಡಹುವುದು ಸುಲಭ'** ಎಂಬ ಗಾದೆಯೂ ಕೂಡ ಮೇಲಿನ ಗಾದೆಯ ಅರ್ಥವನ್ನು ಸಮರ್ಥಿಸುತ್ತದೆ.

**ಅಥವಾ**

**ಅತಿ ಆಸೆ ಗತಿ ಕೇಡು** **ಜ್ಞಾನದೀಪ ಪುಟಸಂಖ್ಯೆ 232**

ಗಾದೆಗಳು ವೇದಗಳಿಗೆ ಸಮಾನ ಎನ್ನುತ್ತಾರೆ. ಗಾದೆ ವೇದಕ್ಕಿಂತ ಒಂದುಪಟ್ಟು ಮಿಗಿಲಾಗಿರುವುದರಿಂದ 'ವೇದ ಸುಳ್ಳಾದರೂ ಗಾದೆ ಸುಳ್ಳಾಗದು' ಎಂಬು ನುಡಿ ಹುಟ್ಟಿತು. ಹಿರಿಯರ ಅನುಭವದ ನುಡಿಮುತ್ತುಗಳೇ ಈ ಗಾದೆಗಳು. ಬಿಂದುವಿನಂತಹ ಗಾದೆಯಲ್ಲಿ ಸಿಂಧುವಿನಂತಹ ವಿಶಾಲಾರ್ಥವು ಅಡಗಿರುತ್ತದೆ. ಅಂತಹ ಮಹತ್ತ್ವದ ಗಾದೆಗಳಲ್ಲಿ 'ಅತಿ ಆಸೆ ಗತಿ ಕೇಡು' ಎಂಬ ಗಾದೆಯೂ ಸಹ ಒಂದಾಗಿದೆ.

ಪ್ರಸ್ತುತ 'ಅತಿ ಆಸೆ ಗತಿ ಕೇಡು' ಗಾದೆಯ ತಿರುಳನ್ನು 'ತಿರುಕನ ಕನಸು' ಪದ್ಯ ತುಂಬಾ ಸ್ಪಷ್ಟವಾಗಿ ವಿವರಿಸುತ್ತದೆ. ತಿರುಕ ರಾಜನಾಗುವ ಅವಕಾಶ ಪಡೆದಂತೆಯೂ ಸಕಲ ವೈಭವಗಳಲ್ಲಿ ಮರೆದಂತೆಯೂ ಕನಸು

ಕಾಣುತ್ತಾನೆ. ಶತ್ರುಗಳ ದಾಳಿ ಎದುರಾಗುತ್ತಲೇ ಕೈಕಾಲುಗಳನ್ನು ಒದರಿ ಎಚ್ಚರಗೊಳ್ಳುತ್ತಾನೆ. ಅಂದು ಲಭಿಸಿದ ಅನ್ನದ ಬಟ್ಟಲೂ ಮಣ್ಣು ಪಾಲಾಗುತ್ತದೆ. ತನ್ನ ಇತಿಮಿತಿ ಮೀರಿ ಆಸೆ ಪಡಬಾರದು ಏಕೆಂದರೆ ಹಾಗೆ ಮಿತಿಮೀರಿ ಆಸೆ ಪಟ್ಟದ್ದು ಅದೃಷ್ಟವಶಾತ್ ಸಿಕ್ಕರೂ ಅದರ ಬೆನ್ನಲ್ಲೆ ಬರುವ ಅಪಾಯ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲು ಶಕ್ತಿ ಇರುವುದಿಲ್ಲ.

**IX. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ. 6 x 3 = 18**

33. **"ಗುರೂಪದೇಶ ಎಂದರೆ ತಲೆ ನೆರೆಯದೆ ಬರುವ ಮುಪ್ಪು."** **ಜ್ಞಾನದೀಪ ಪುಟಸಂಖ್ಯೆ 30**

**ಆಯ್ಕೆ:–** ಈ ವಾಕ್ಯವನ್ನು ಡಾ.ಬನ್ನಂಜೆ ಗೋವಿಂದಾಚಾರ್ಯರರು ಅನುವಾದಿಸಿದ **'ಕಾದಂಬರಿ'** ಕೃತಿಯಿಂದ ಆಯ್ದ **'ಶುಕನಾಸನ ಉಪದೇಶ'** ಎಂಬ ಪಾಠದಿಂದ ಆರಿಸಿಕೊಳ್ಳಲಾಗಿದೆ.

**ಸಂದರ್ಭ:–** ಕಾಶ್ಮೀರದ ರಾಜ ತಾರಾಪೀಡನ ಮಂತ್ರಿ ಶುಕನಾಸನು, ಯುವರಾಜನಾದ ಚಂದ್ರಪೀಡನ ಪಟ್ಟಾಭಿಷೇಕದ ಸಂದರ್ಭದಲ್ಲಿ ಉಪದೇಶ ನೀಡುವ ಸನ್ನಿವೇಶದಲ್ಲಿ ಈ ಮಾತನ್ನು ಹೇಳುತ್ತಾನೆ. ಗುರೂಪದೇಶ ಎಂದರೆ ಜನರ ಒಳ ಹೊರಗಣ ಕೊಳೆಗಳನ್ನು ತೊಳೆದು ಬಿಡುವ ನೀರಿಲ್ಲದ 'ಮೀಹ'. ತಲೆ ನೆರೆಯದೆ, ಮೈ ಸುಕ್ಕುಗಟ್ಟದೆ ಮೂಡುವ ಮುಪ್ಪು; ಬೊಜ್ಜು ಬೆಳೆಯದೆ ಬರುವ ಗುರುತ್ವ; ಬಂಗಾರವಿಲ್ಲದೆ ಮಾಡಿದ ಬೆಲೆ ಬಾಳುವ ಕಿವಿಯೋಲೆ; ಪಂಜು ಇಲ್ಲದೆ ಬೆಳಗುವ ಬೆಳಕು; ಉದ್ವೇಗ ಬರಿಸದ ಜಾಗರಣೆ ಎಂದು ಉಪದೇಶ ನೀಡುವ ಸನ್ನಿವೇಶವಾಗಿದೆ.

**ಸ್ವಾರಸ್ಯ:–** ಈ ವಾಕ್ಯದಲ್ಲಿ ಗುರೂಪದೇಶ ಎಂದರೆ ತಲೆ ನೆರೆಯದೆ ಅಂದರೆ ವಯಸ್ಸಾಗದೇ ಬರುವ ಮುಪ್ಪು ಎಂದು ಗುರೂಪದೇಶದ ಮಹತ್ತ್ವವನ್ನು ಅತ್ಯಂತ ಸ್ವಾರಸ್ಯಪೂರ್ಣವಾಗಿ ಅರ್ಥೈಸಲಾಗಿದೆ.

34. **"ಆವಂತಿ ಸುಕುಮಾರನೆಂದು ಪೆಸರನಿಟ್ಟಂ"** **ಜ್ಞಾನದೀಪ ಪುಟಸಂಖ್ಯೆ 50**

**ಆಯ್ಕೆ:–** ಈ ವಾಕ್ಯವನ್ನು ಶಿವಕೋಟ್ಯಾಚಾರ್ಯ ಅವರು ರಚಿಸಿರುವ **'ವಡ್ಡಾರಾಧನೆ'** ಕೃತಿಯಿಂದ ಆಯ್ದ **'ಸುಕುಮಾರಸ್ವಾಮಿ ಕಥೆ'** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:–** ಉಜ್ಜೇನಿಯ ಅರಸನಾದ ವೃಷಭಾಂಕನು ಸುಕುಮಾರಸ್ವಾಮಿಯ ವೈಭವ ಜೀವನವನ್ನು ಕಂಡು 'ಅರಸನಾದ ನಾನು ಸಹ ಇಷ್ಟೊಂದು ವೈಭವದ ಜೀವನ ನಡೆಸಲು ಸಾಧ್ಯವಾಗಿಲ್ಲ' ಎಂದು ಹೇಳಿಕೊಳ್ಳುವ ಸಂದರ್ಭದಲ್ಲಿ ಈ ಮಾತು ಬಂದಿದೆ.

**ಸ್ವಾರಸ್ಯ:–** ಸುಕುಮಾರಸ್ವಾಮಿಯ ವೈಭವವನ್ನು ಕಂಡ ಉಜ್ಜೇನಿ ಅರಸ ವೃಷಭಾಂಕನು ಸುಕುಮಾರಸ್ವಾಮಿಯ ವೈಭೋಗ ಅಲ್ಲ" 'ಅವಂತಿ ಸುಕುಮಾರ' ಎಂದು ಹೆಸರನ್ನು ಕೊಟ್ಟದ್ದು, ಸುಕುಮಾರಸ್ವಾಮಿಯ ವೈಭೋಗದ ಜೀವನದ ಪರಮಾವಧಿಯನ್ನು ಸ್ವಾರಸ್ಯಪೂರ್ಣವಾಗಿ ಅರ್ಥೈಸುತ್ತದೆ.

**35. “ಕಿಱಿದುಪೊನ್ನಂ ತೆಗೆದುಕೊಳ್ಳಂ”** **ಜ್ಞಾನದೀಪ ಪುಟ ಸಂಖ್ಯೆ 16 (ವಿಶೇಷ ಪುಟಗಳು)**
**ಆಯ್ಕೆ:** ಈ ಮಾತನ್ನು ಕವಿ ದುರ್ಗಸಿಂಹನು ರಚಿಸಿರುವ **“ಕರ್ನಾಟಕ ಪಂಚತಂತ್ರ”** ಕೃತಿಯಿಂದ ಆಯ್ದ **‘ವೃಕ್ಷಸಾಕ್ಷಿ’** ಎಂಬ ಗದ್ಯಪಾಠದಿಂದ ಆರಿಸಲಾಗಿದೆ.

**ಸಂದರ್ಭ:** ದುಷ್ಟಬುದ್ಧಿಯು ಧರ್ಮಬುದ್ಧಿಯನ್ನು ಮೋಸಗೊಳಿಸಿ ಹೂತಿಟ್ಟ ಹೊನ್ನೆಲ್ಲವನ್ನು ತೆಗೆದುಕೊಂಡು ಗುಳಿಯನ್ನು ಮೊದಲಿನಂತೆ ಮುಚ್ಚಿ, ತಾನೇ ಧರ್ಮಬುದ್ಧಿಯ ಹತ್ತಿರ ಬಂದು “ಖರ್ಚಿಗೆ ಹೊನ್ನು ಇಲ್ಲ, ಸ್ವಲ್ಪ ಹೊನ್ನನ್ನು ತೆಗೆದುಕೊಳ್ಳೋಣ ಬಾ” ಎಂದು ಹೇಳುವ ಸಂದರ್ಭದಲ್ಲಿ ಈ ಮಾತನ್ನು ಹೇಳುತ್ತಾನೆ.

**ಸ್ವಾರಸ್ಯ:** “ಮಾಡಿದುಣ್ಣೊ ಮಾರಾಯ” ಎಂಬ ನೀತಿಯಂತೆ ಇನ್ನೊಬ್ಬರಿಗೆ ಮೋಸ ಮಾಡಲು ಹೋಗಿ ತಾನೇ ಹಾಳಾದ ರೀತಿ, ನಮ್ಮೆಲ್ಲರಿಗೂ ಒಂದು ಜೀವನದ ಪಾಠವನ್ನು ದುಷ್ಟಬುದ್ಧಿಯು ಧರ್ಮಬುದ್ಧಿ ಮೇಲೆ ಕಳ್ಳತನವನ್ನು ಆರೋಪಿಸಿದ್ದನ್ನು ಇಲ್ಲಿ ಬಹು ಸ್ವಾರಸ್ಯಪೂರ್ಣವಾಗಿ ಹೇಳಿದ್ದಾರೆ.

**36. “ಹರಿಯ ಹಗೆ ಹೊಗೆದೋರದುರುಹದೆ ಬರಿದೆ ಹೋಹುದೆ”** **ಪುಟ ಸಂಖ್ಯೆ 18 (ವಿಶೇಷ ಪುಟಗಳು)**
**ಆಯ್ಕೆ:** ಈ ವಾಕ್ಯವನ್ನು **ಕುಮಾರವ್ಯಾಸನೆಂದು** ಪ್ರಸಿದ್ಧನಾದ **ಗದುಗಿನ ನಾರಣಪ್ಪನು** ರಚಿಸಿರುವ **‘ಕರ್ನಾಟ ಭಾರತ ಕಥಾಮಂಜರಿ’** ಎಂಬ ಮಹಾಕಾವ್ಯದಿಂದ ಆಯ್ದ **‘ಕೌರವೇಂದ್ರನ ಕೊಂದೆ ನೀನು’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:** ಕೃಷ್ಣನು ಪಾಂಡವ ಕೌರವರ ನಡುವೆ ಸಂಧಿ ಮಾಡಲು ಹೋಗಿ, ವಿಫಲನಾಗಿ ಹಿಂದಿರುಗುವಾಗ ಕರ್ಣನನ್ನು ಜೊತೆಯಲ್ಲಿ ಕರೆದುಕೊಂಡು ಬಂದು ಮೈದುನತನದ ಸರಸದಲ್ಲಿ ಮಾತನಾಡಿಸಿ ಅವನಿಗೆ ಅವನ ಜನ್ಮರಹಸ್ಯವನ್ನು ಹೇಳಿದಾಗ ಕರ್ಣನ ಮನಸ್ಸಿನಲ್ಲಿ ಮೂಡಿದ ಭಾವನೆ ವಿವರಿಸುವ ಸಂದರ್ಭದಲ್ಲಿ ಈ ಮಾತನ್ನು ಕವಿಯು ಹೇಳುತ್ತಾನೆ.

**ಸ್ವಾರಸ್ಯ:** ತನ್ನ ಜನ್ಮ ರಹಸ್ಯವನ್ನು ಅರಿತು ಕರ್ಣನು ಮನದಲ್ಲಿ ಚಿಂತಿತನಾಗಿ ಮೌನವಾದಾಗ, ಕೃಷ್ಣನು “ನಿನ್ನ ದುರ್ದೆಸೆಯನ್ನು ಕಾಣಲು ಇಷ್ಟವಿಲ್ಲ; ನಾನು ನಿನ್ನ ಹಿತಚಿಂತಕ” ಎಂದು ಹೇಳುವುದರ ಮೂಲಕ ಕರ್ಣನನ್ನು ಸಮಾಧಾನಪಡಿಸಿದ್ದು ಸ್ವಾರಸ್ಯಪೂರ್ಣವಾಗಿದೆ.

**37. ಎನ್ನಣುಗಾಳನೆನ್ನಣುಗದಮ್ಮನನಿಕ್ಕಿದ ಪಾರ್ಥಭೀಮರು** **ಜ್ಞಾನದೀಪ ಪುಟ ಸಂಖ್ಯೆ 19 (ವಿಶೇಷ ಪುಟಗಳು)**
**ಆಯ್ಕೆ:**– ಈ ವಾಕ್ಯವನ್ನು ಮಹಾಕವಿ **ರನ್ನನು** ರಚಿಸಿರುವ **‘ಸಾಹಸಭೀಮ ವಿಜಯಂ’** ಕೃತಿಯಿಂದ ಆಯ್ದ **‘ಛಲಮನೆ ಮೆಱೆವೆಂ’** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:**– ಕುರುಕ್ಷೇತ್ರಯುದ್ಧದ ಸಮಯದಲ್ಲಿ ಶರಶಯ್ಯೆಯಲ್ಲಿ ಮಲಗಿರುವ ಭೀಷ್ಮರನ್ನು ಕಾಣಲು ಬಂದ ಸಂದರ್ಭದಲ್ಲಿ ದುರ್ಯೋಧನನು ಭೀಷ್ಮರನ್ನು ಕುರಿತು “ಅಜ್ಜ, ನನ್ನ ಪ್ರೀತಿಯ ಬಂಟನಾದ ಕರ್ಣನನ್ನು, ಪ್ರೀತಿಯ ತಮ್ಮನಾದ ದುಶ್ಯಾಸನನನ್ನು ಕೊಂದ ಅರ್ಜುನ ಭೀಮರು ಇರುವತನಕ ಹಾಗೂ ನನ್ನ ದೇಹದಲ್ಲಿ ಪ್ರಾಣ ಇರುವತನಕ ನಾನು ಸಂಧಿಯನ್ನು ಒಪ್ಪುವುದಿಲ್ಲ. ಮೊದಲು ಅವರಿಬ್ಬರನ್ನು ಕೊಲ್ಲುವೆನು; ಕೊಂದ ಬಳಿಕ ಸಂಧಿ ಮಾಡಿಕೊಳ್ಳುವೆನು ಎಂದು ಹೇಳುವಾಗ ಈ ಮಾತನ್ನು ಭೀಷ್ಮನಿಗೆ ಹೇಳುತ್ತಾನೆ.

**ಸ್ವಾರಸ್ಯ:–** ಇಲ್ಲಿ ದುರ್ಯೋಧನನು ಕರ್ಣನ ಮೇಲಿಟ್ಟಿರುವ ಪ್ರೇಮ, ಸಹೋದರನ ಮೇಲಿಟ್ಟಿರುವ ವಾತ್ಸಲ್ಯ ಹಾಗೂ ಪಾರ್ಥಭೀಮರನ್ನು ಕೊಲ್ಲಬೇಕೆಂಬ ಛಲವಂತಿಕೆಗಳು ಬಹುಸ್ವಾರಸ್ಯಪೂರ್ಣವಾಗಿ ವ್ಯಕ್ತವಾಗಿವೆ.

**38. "ವಿದ್ಯಾಧನಮೆ ಧನಮಪ್ಪುದು"** **ಜ್ಞಾನದೀಪ ಪುಟ ಸಂಖ್ಯೆ 139**

**ಆಯ್ಕೆ:–** ಈ ವಾಕ್ಯವನ್ನು **ಆದಿ ಮಹಾಕವಿ ಪಂಪನು** ರಚಿಸಿರುವ **'ವಿಕ್ರಮಾರ್ಜುನ ವಿಜಯಂ'** ಕೃತಿಯಿಂದ ಆಯ್ದ **'ಕೆಮ್ಮನೆ ಮೀಸೆವೊತ್ತನೇ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

**ಸಂದರ್ಭ:–** ದ್ರೋಣನು ಬಡತನದಿಂದ ಬಳಲುವ ಸಮಯದಲ್ಲಿ ತನ್ನ ಮಗನೊಡನೆ ಸಹಾಯವನ್ನು ಯಾಚಿಸಿ ಪರಶುರಾಮನ ಬಳಿಗೆ ಬಂದ ಸಂದರ್ಭದಲ್ಲಿ ಈ ಮಾತನ್ನು ದ್ರೋಣನು ಪರಶುರಾಮನಿಗೆ ಹೇಳುತ್ತಾನೆ.

**ಸ್ವಾರಸ್ಯ :–** "ಜಗತ್ತಿನಲ್ಲಿ ಶ್ರೇಷ್ಠವಾದುದು ವಿದ್ಯೆ. ಇದೇ ನಿಜವಾದ ಧನ. ಇದನ್ನೇ ನನಗೆ ದಯೆಪಾಲಿಸಿ" ಎಂದು ದ್ರೋಣನು ಹೇಳಿರುವುದು **ವಿದ್ಯೆಯ ಶ್ರೇಷ್ಠತೆಯನ್ನು** ಎತ್ತಿಹಿಡಿಯುತ್ತದೆ.

**X. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ.** **1 x 4 = 4**

39. ನೀಲಮೇಘಮಂಡಲ–ಸಮ ಬಣ್ಣ
ಮುಗಿಲಿಗೆ ರೆಕ್ಕೆಗಳೊಡೆದವೊ ಅಣ್ಣಾ
ಚಿಕ್ಕೆಯಮಾಲೆಯ ಸೆಕ್ಕಿಸಿಕೊಂಡು
ಸೂರ್ಯ–ಚಂದ್ರರನು ಮಾಡಿದೆ ಕಣ್ಣಾ
ಹಕ್ಕಿ ಹಾರುತಿದೆ ನೋಡಿದಿರಾ?

**ಅಥವಾ** **ಜ್ಞಾನದೀಪ ಪುಟ ಸಂಖ್ಯೆ 86**

ಯುಗ–ಯುಗಗಳ ಹಣೆ ಬರೆಹವ ಒರಸಿ
ಮನ್ವಂತರಗಳ ಭಾಗ್ಯವ ತೆರೆಸಿ
ರೆಕ್ಕೆಯ ಬೀಸುತ ಚೇತನಗೊಳಿಸಿ
ಹೊಸಗಾಲದ ಹಸುಮಕ್ಕಳ ಹರಸಿ
ಹಕ್ಕಿ ಹಾರುತಿದೆ ನೋಡಿದಿರಾ?

**XI. ಕೆಳಗಿನ ಪದ್ಯಭಾಗವನ್ನು ಓದಿ ಅರ್ಥಮಾಡಿಕೊಂಡು, ಅಡಕವಾಗಿರುವ ಮೌಲ್ಯವನ್ನಾಧರಿಸಿ ಸಾರಾಂಶವನ್ನು ಬರೆಯಿರಿ.** **1 x 4 = 4**

**40. ತೆಗೆದುತ್ತರೀಯಮಂ ಮುರಿದು ಕುದುರೆಯ ಗಳಕೆ ।**
**ಬಿಗಿದು ಕದಳೀದ್ರುಮಕೆ ಕಟ್ಟಲ್ಕೆ ಮುನಿಸುತರ್ ।**
**ಮಿಗೆ ನಡುಗಿ ಬೇಡಬೇಡರಸುಗಳ ವಾಜಿಯಂ ಬಿಡು ಬಿಡಿವರೆಮ್ಮನೆನಲು ॥**
**ನಗುತೆ ಪಾರ್ವರ ಮಕ್ಕಳಂಜಿದೊಡೆ ಜಾನಕಿಯ ।**
**ಮಗನಿದಕೆ ಬೆದರುವನೆ ಪೋಗಿ ನೀವೆಂದು ಲವ ।**
**ನಗಡುತನದಿಂದೆ ಬಿಲ್ದಿರುವನೇರಿಸಿ ತೀಡಿ ಜೇಗೈದು ನಿಂತಿರ್ದನು॥** **ಜ್ಞಾನದೀಪ ಪುಟ ಸಂಖ್ಯೆ 126**

ಈ ಪದ್ಯಭಾಗವನ್ನು **ಕವಿ ಲಕ್ಷ್ಮೀಶನು** ರಚಿಸಿರುವ **'ಜೈಮಿನಿ ಭಾರತ'** ಮಹಾಕಾವ್ಯದಿಂದ ಆಯ್ದ **'ವೀರಲವ'** ಎಂಬ ಪದ್ಯಭಾಗದಿಂದ ಆರಿಸಲಾಗಿದೆ.

ವೀರಲವನು ತನ್ನ ಉತ್ತರೀಯದಿಂದ ಶ್ರೀರಾಮನ ಯಜ್ಞಾಶ್ವವನ್ನು ಬಾಳೆಯಗಿಡಕ್ಕೆ ಕಟ್ಟಿ ಹಾಕಿದ ಸಂದರ್ಭದಲ್ಲಿ ಕವಿಯು ಈ ಮಾತನ್ನು ಹೇಳುತ್ತಾನೆ.

ಮೇಲು ಹೊದಿಕೆಯನ್ನು ತೆಗೆದು ಹುರಿಮಾಡಿ ಕುದುರೆಯ ಕೊರಳಿಗೆ ಬಿಗಿದು ಬಾಳೆಯ ಗಿಡಕ್ಕೆ ಕಟ್ಟಲು, ಮುನಿಗಳ ಮಕ್ಕಳು ಅಧಿಕವಾಗಿ ನಡುಗಿ "ಬೇಡಬೇಡ ಅರಸುಗಳ ಕುದುರೆಯನ್ನು ಬಿಡು, ನಮ್ಮನ್ನು ಹೊಡೆಯವರು" ಎಂದಾಗ, ನಗುತ "ಬ್ರಾಹ್ಮಣರ ಮಕ್ಕಳು ಹೆದರಿದರೆ. ಜಾನಕಿಯ ಮಗನು ಇದಕ್ಕೆ ಹೆದರುವನೇ, ನೀವು ಹೋಗಿ" ಎಂದು ಲವನು ಶೌರ್ಯದಿಂದ ಹೆದೆಯನ್ನು ಬಿಗಿದು, ಸವರಿ ಧನುಷ್ಟಂಕಾರ ಮಾಡಿ ನಿಂತಿದ್ದನು.

ಈ ಪದ್ಯಭಾಗದಲ್ಲಿ **ಲವನ ಧೈರ್ಯ, ಶೌರ್ಯ, ವೀರತನ ಮತ್ತು ಕಾರ್ಯತತ್ಪರತೆ ಮೊದಲಾದ ಮೌಲ್ಯಯುತ ಅಂಶಗಳು** ಈ ಪದ್ಯದಲ್ಲಿ ಅಭಿವ್ಯಕ್ತಗೊಂಡಿವೆ.

**XII. ಕೆಳಗಿನ ಪ್ರಶ್ನೆಗಳಿಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ. 2 x 4 = 8**

**41. ಶಬರಿಯ ಚಿಂತೆ ಹಿಂಗಿ ಹೋದ ಸಂದರ್ಭದ ಸ್ವಾರಸ್ಯವನ್ನು ನಿಮ್ಮ ಮಾತುಗಳಲ್ಲಿ ಬರೆಯಿರಿ.**

ಉತ್ತರ:– **ರಾಮಲಕ್ಷ್ಮಣರನ್ನು ಕಂಡು ಶಬರಿ ಸಂತಸ ತುಂಬಿಕೊಳ್ಳುತ್ತಾಳೆ. ಅವರಿಗೆ ರುಚಿಕರ ಹಣ್ಣುಗಳನ್ನು ನೀಡಿ ಸತ್ಕರಿಸುತ್ತಾಳೆ. ರಾಮನನ್ನು ಕಂಡು ತಾನು ಪರಮಸುಖಿಯೆಂದು ನರ್ತಿಸುತ್ತಾಳೆ. ರಾಮನೂ ಕೂಡ "ನಿನ್ನ** ಅದರದಿಂದ ನಾವು ಸುಖಿ, ನಿನಗೆ ನಾವು ಋಣಿ" **ಎನ್ನುತ್ತಾನೆ.** ಶಬರಿಯು **ಕಣ್ಣೀರು ತುಂಬಿಕೊಂಡು "ನನ್ನ** ಜಾಡನ್ನು ಹಿಡಿದು ಬಂದು ಸಂತಸ ನೀಡಿದಿರಿ, ಹಸಿವು, ತೃಷೆ ಹಿಂಗಿತೆ? ನಾನೊಬ್ಬಳು ಬಡವಿ, ನನ್ನ ಮೇಲೆ ಕರುಣೆ ತೋರಿದಿರಾ?" **ಎನ್ನುತ್ತಾಳೆ. ರಾಮನು "ನಿನ್ನ ಆತಿಥ್ಯದಲ್ಲಿ ಸ್ವಲ್ಪವೂ ಕೊರತೆಯಿಲ್ಲ, ನಮ್ಮ ಅರಮನೆಗಿಂತ ನಿನ್ನ ಆಶ್ರಮವೇ ಚಂದ, ನಿನ್ನ ಮನಯೇ ನಮ್ಮ ಮನೆ, ನೀನೆ ತಾಯಿಯಂತೆ" ಎನ್ನುತ್ತಾನೆ.** ಶಬರಿಯು **"ನಿನ್ನ ರೂಪದಂತೆ ನಿನ್ನ ಮಾತು ಸುಂದರ ಹಾಗೂ ಉದಾರ. ನಾನು ಧನ್ಯಳಾದೆ. ಶುದ್ಧ ಮತಂಗ ವರ ಫಲಿಸಿತು ನನಗೆ. ನಿಮ್ಮನ್ನು ಕಂಡು ಪುಣ್ಯವು ತುಂಬಿತು, ಗುರುಪೂಜೆಯನ್ನು ಮಾಡಿದ ಪುಣ್ಯ ನನಗೆ ಇಂದು ಸೇರಿತು. ನನ್ನ ಚಿಂತೆಯೆಲ್ಲ ಹಿಂಗಿ ಹೋಯಿತು ಎನ್ನುತ್ತಾಳೆ. ಜ್ಞಾನದೀಪ ಪುಟ ಸಂಖ್ಯೆ 7 ಮತ್ತು 8**

**42. ಹಲಗಲಿ ದಂಗೆಯ ಪರಿಣಾಮವೇನು? ವಿವರಿಸಿ.**

ಉತ್ತರ : **ಕ್ರಿ.ಶ. 1857 ರ ಪ್ರಥಮ ಸ್ವಾತಂತ್ರ್ಯ ಸಂಗ್ರಾಮದ ನಂತರ ಬ್ರಿಟಿಷ್ ಸರ್ಕಾರ "ಅನುಮತಿ ಇಲ್ಲದೆ ಭಾರತೀಯರು ಶಸ್ತ್ರಾಸ್ತ್ರಗಳನ್ನು ಹೊಂದುವಂತಿಲ್ಲ ಮತ್ತು ತಮ್ಮಲ್ಲಿರುವ ಆಯುಧಗಳನ್ನು ಸರ್ಕಾರಕ್ಕೆ ಒಪ್ಪಿಸಬೇಕು" ಎಂಬ ಆದೇಶವನ್ನು ನೀಡಿತು. ಈ ಆದೇಶವನ್ನು** ವಿರೋಧಿಸಿ ಹಲಗಲಿಯ ಪೂಜೇರಿ

ಹನುಮ, ಬ್ಯಾಡರ ಬಾಲ, ಜಡಗ, ರಾಮ **ಮೊದಲಾದ ವೀರರು ತಮ್ಮಲ್ಲಿರುವ ಆಯುಧಗಳನ್ನು ಕೊಡಲು ಒಪ್ಪದೆ ಇದ್ದದ್ದು, ಹಲಗಲಿಯ ಬೇಡರು ದಂಗೆ ಏಳಲು ಕಾರಣವಾಯಿತು. ಬ್ರಿಟಿಷರ ದಂಡು ದಂಗೆಯನ್ನು ಅಡಗಿಸಲು ಹಲಗಲಿಗೆ ಬಂದಿತು. ಸೈನ್ಯವು ಜನರನ್ನು ಬೆಂಬತ್ತಿ ಕಡಿದು ಹಾಕಿದವು. ಜನರ ಮೇಲೆ ಕರುಣೆಯಿಲ್ಲದಂತೆ ಗುಂಡು ಹಾರಿಸಿತು. ಹಲಗಲಿಯ ಪೂಜೇರಿ ಹನುಮ, ಬ್ಯಾಡರ ಬಾಲ, ಜಡಗ, ರಾಮ ಮೊದಲಾದ ವೀರರು ಹೋರಾಡಿ ವೀರಮರಣವನ್ನು ಹೊಂದಿದರು. ಬ್ರಿಟೀಷರ ಸೈನಿಕರು ಕೊಡಲಿ, ಕೋರೆ, ಕುಡ, ಕಬ್ಬಿಣ, ಮೊಸರು, ಬೆಣ್ಣೆ, ಹಾಲು, ಉಪ್ಪು, ಎಣ್ಣೆ, ಅರಿಶಿನ, ಜೀರಿಗೆ, ಅಕ್ಕಿ, ಸಕ್ಕರೆ, ಬೆಲ್ಲ, ಗಂಗಳ, ಚರಿಗೆ, ಮಂಗಳಸೂತ್ರ ಎಲ್ಲವನ್ನು ಲೂಟಿ ಮಾಡಿ, ಊರಿಗೆ ಬೆಂಕಿ ಇಟ್ಟು, ಬೂದಿ ಮಾಡಿದರು. ಹಲಗಲಿಯು ಗುರುತಿಸಲಾಗದಷ್ಟು ಸಂಪೂರ್ಣನಾಶವಾಯಿತು.** **ಜ್ಞಾನದೀಪ ಪುಟ ಸಂಖ್ಯೆ 92**

**XIII. ಈ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ.**

**1 x 4 = 4 (2+2)**

43. ವೇಳೆಯ ಅಪವ್ಯಯ ಅಂಬೇಡ್ಕರರಿಗೆ ಅಪರಾಧವಾಗಿ ಕಾಣುತ್ತಿತ್ತು. ಒಂದು ಕ್ಷಣವನ್ನೂ ಅವರು ಅಪವ್ಯಯ ಮಾಡುತ್ತಿರಲಿಲ್ಲ. ವ್ಯಾಪಾರಿಗೆ ವೇಳೆ ಎಂದರೆ ಹಣ. ಅಂಬೇಡ್ಕರರಿಗೆ ವೇಳೆ ಎಂದರೆ ಜ್ಞಾನಾರ್ಜನೆ. ತಮ್ಮ ಬದುಕಿನ ಒಂದು ಕ್ಷಣವನ್ನೂ ವ್ಯರ್ಥವಾಗಿ ಕಳೆಯದ ನಮ್ಮ ಕಾಲದ ಇಬ್ಬರು ಮಹನೀಯರೆಂದರೆ ಒಬ್ಬರು ಗಾಂಧೀಜಿ ಮತ್ತೊಬ್ಬರು ಅಂಬೇಡ್ಕರರು. ಕಳೆದ ಕ್ಷಣ ಕಳೆದೇ ಹೋಗುತ್ತದೆಂಬ ಅರಿವು ಅವರದಾಗಿತ್ತು. ಅಮೆರಿಕದಲ್ಲಿ, ಇಂಗ್ಲೆಂಡಿನಲ್ಲಿ ಓದುತ್ತಿದ್ದಾಗ ಹೇಗೋ ಹಾಗೆ ಹಿಂತಿರುಗಿ ಸಾರ್ವಜನಿಕ ಜೀವನದಲ್ಲಿ ತೊಡಗಿದ ಮೇಲೆಯೂ ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ; ಪುಸ್ತಕ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು, ಅನೇಕ ಸಲ ರಾತ್ರಿ ಯುದ್ದಕ್ಕೂ ಅವರು ಓದು ಬರೆಹಗಳಲ್ಲಿ ತೊಡಗಿರುತ್ತಿದ್ದುದ್ದುಂಟು. ಅವರ ನೆಚ್ಚಿನ ನಾಯಿ ಬೆಳಗಿನ ನೇವರಿಕೆಗಾಗಿ ಬಂದು ಕಾಲಬಳಿ ಸುಳಿದಾಗಲೆ ರಾತ್ರಿ ಕಳೆದುಹೋದ ಅರಿವು ಅವರಿಗಾದದ್ದುಂಟು. ರಾತ್ರಿ ಮನೆಗೆ ಹೋಗುತ್ತೇನೆಂದು ಹೇಳಿ ಹೊರಟುಹೋದ ಕಾರ್ಯದರ್ಶಿ ಬೆಳಗಿನಲ್ಲಿ ಮತ್ತೆ ಬಂದಾಗ ಮನೆಗೇಕೆ ಇನ್ನೂ ಹೋಗಲಿಲ್ಲ ಎಂದು " ಕೇಳಿದ್ದುಂಟು. ಅಂಥ ಏಕಾಗ್ರತೆಯ ಓದು ಬರೆಹ ಅವರದು. ಅವರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯದಾಹದಂತಿತ್ತು. ದಟ್ಟಡವಿಯ

ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು.

**ಅ) ಅಂಬೇಡ್ಕರರ ಜ್ಞಾನದಾಹ ಹೇಗಿತ್ತು?**

ಉತ್ತರ : ಅವರ ಜ್ಞಾನದಾಹ ಪುರಾತನ ಕಾಲದ ಚಕ್ರವರ್ತಿಯೊಬ್ಬನ ಸಾಮ್ರಾಜ್ಯದಾಹದಂತಿತ್ತು. ದಟ್ಟಡವಿಯ ಮಧ್ಯದಲ್ಲಿ ಗ್ರಂಥಾಲಯ ಒಂದನ್ನು ನಿರ್ಮಿಸಿಕೊಂಡು ತಮ್ಮ ಕೊನೆಯ ದಿನಗಳನ್ನು ಅಲ್ಲಿಯೇ ಕಳೆಯಬೇಕೆಂಬ ಅಭಿಲಾಷೆ ಅವರದಾಗಿತ್ತು. ಏಕಾಗ್ರತೆಯ ಓದು ಬರೆಹ ಅವರದು.

**ಆ) ಅಂಬೇಡ್ಕರರು ತಮ್ಮ ಬಿಡುವಿನ ಸಮಯವನ್ನು ಹೇಗೆ ಕಳೆಯುತ್ತಿದ್ದರು?**

ಉತ್ತರ : ತಮ್ಮ ಬಿಡುವನ್ನೆಲ್ಲ ಅವರು ಓದುವುದಕ್ಕೆ ಮೀಸಲಾಗಿರಿಸುತ್ತಿದ್ದರು. ರಂಜನೆಗಾಗಿ ಓದುವವರು ಅವರಲ್ಲ; ಪುಸ್ತಕ ಬೋಧನೆಯೇ ರಂಜನೆ ಎನ್ನುವುದು ಅವರ ಸೂತ್ರವಾಗಿತ್ತು. ಹೀಗಾಗಿ ಗ್ರಂಥ ಸಹವಾಸ ಅವರಿಗೆ ಅಪಾರ ಸಂತೋಷವನ್ನಲ್ಲದೆ ಬಯಸುತ್ತಿದ್ದ ಏಕಾಂತವನ್ನೂ ಒದಗಿಸುತ್ತಿತ್ತು, ಅನೇಕ ಸಲ ರಾತ್ರಿ ಯುದ್ದಕ್ಕೂ ಅವರು ಓದು ಬರೆಹಗಳಲ್ಲಿ ತೊಡಗಿರುತ್ತಿದ್ದುದ್ದುಂಟು.

**XIV. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ, ಪತ್ರ ಬರೆಯಿರಿ. 1 x 5 = 5**

44. ನಿಮ್ಮನ್ನು ಧಾರವಾಡದ ನಿವಾಸಿ 'ಹರ್ಷಿತಾ' ಎಂದು ಭಾವಿಸಿಕೊಂಡು, ನಿಮ್ಮ ಬಡಾವಣೆಯಲ್ಲಿ 'ಸಾರ್ವಜನಿಕ ಶೌಚಾಲಯ' ನಿರ್ಮಿಸಿಕೊಡುವಂತೆ ಕೋರಿ ಮಹಾನಗರ ಪಾಲಿಕೆಯ ಆಯುಕ್ತರಿಗೆ ಪತ್ರವನ್ನು ಬರೆಯಿರಿ.

**ಅಥವಾ** **ಜ್ಞಾನದೀಪ ಪುಟ ಸಂಖ್ಯೆ 262 – 268**

ನಿಮ್ಮನ್ನು ದಾವಣಗೆರೆಯ ಸರ್ಕಾರಿ ಪ್ರೌಢಶಾಲೆಯ 'ಅಥರ್ವ' ಎಂದು ಭಾವಿಸಿಕೊಂಡು, 'ಶಾಲೆಯಲ್ಲಿ ಆಚರಿಸಿದ ವಾರ್ಷಿಕೋತ್ಸವ' ಕಾರ್ಯಕ್ರಮವನ್ನು ವಿವರಿಸಿ, ಬೆಳಗಾವಿಯ ಸರ್ಕಾರಿ ಪ್ರೌಢಶಾಲೆಯಲ್ಲಿ ವ್ಯಾಸಂಗ ಮಾಡುತ್ತಿರುವ 'ಸಿದ್ಧಾಂತ್' ಎಂಬ ಹೆಸರಿನ ಗೆಳೆಯನಿಗೆ ಪತ್ರವನ್ನು ಬರೆಯಿರಿ.

**ಇವರಿಂದ**

ಹರ್ಷಿತಾ

10 ನೇ ತರಗತಿ

ಧಾರವಾಡ.

**25 ಮಾರ್ಚ್, 2023**

ಧಾರವಾಡ

**ಇವರಿಗೆ**

ಮಾನ್ಯ ಆಯುಕ್ತರು

ಮಿನಿ ವಿಧಾನಸೌಧ,

ಧಾರವಾಡ.

**ಮಾನ್ಯರೇ,**

**ವಿಷಯ:**– ನಮ್ಮ ಬಡಾವಣೆಯಲ್ಲಿ 'ಸಾರ್ವಜನಿಕ ಶೌಚಾಲಯ' ನಿರ್ಮಿಸಿಕೊಡುವಂತೆ ಕೋರಿ

ಈ ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮಲ್ಲಿ ವಿನಂತಿಸುವುದೇನೆಂದರೆ ನಮ್ಮ ಬಡಾವಣೆಯಲ್ಲಿ ಸಾರ್ವಜನಿಕರಿಗೆ ಸುಲಭ ಶೌಚಾಲಯ ಇಲ್ಲ. ಇದರಿಂದ ಸಾರ್ವಜನಿಕರು ಸಿಕ್ಕ ಸಿಕ್ಕಲಿ ಮಲಮೂತ್ರ ವಿಸರ್ಜನೆ ಮಾಡಿ ಪರಿಸರ ಮಾಲಿನ್ಯ ಮಾಡುತ್ತಿದ್ದಾರೆ. ಆದ್ದರಿಂದ ತಾವು ಆದಷ್ಟು ಬೇಗನೆ ನಮ್ಮ ಬಡಾವಣೆಗೆ ಸಾರ್ವಜನಿಕ ಶೌಚಾಲಯ ನಿರ್ಮಿಸಿಕೊಟ್ಟು, ನಮ್ಮ ಸುಗಮ ಜೀವನಕ್ಕೆ ಅವಕಾಶ ಮಾಡಿಕೊಡಬೇಕೆಂದು ಈ ಮೂಲಕ ತಮ್ಮಲ್ಲಿ ಕೇಳಿಕೊಳ್ಳುತ್ತೇನೆ.

**ವಂದನೆಗಳೊಂದಿಗೆ**

**ಇಂತಿ ತಮ್ಮ ನಂಬುಗೆಯ**

**ಹರ್ಷಾ**

**ಹೊರವಿಳಾಸ**

| | |
|---|---|
| **ಇವರಿಗೆ**<br>ಮಾನ್ಯ ಆಯುಕ್ತರು<br>ಮಿನಿ ವಿಧಾನಸೌಧ,<br>ಧಾರವಾಡ. | **ಇವರಿಂದ**<br>ಹರ್ಷಿತಾ<br>10 ನೇ ತರಗತಿ<br>ಧಾರವಾಡ |

**XV. ಕೆಳಗಿನ ಯಾವುದಾದರೂ ಒಂದು ವಿಷಯದಲ್ಲಿ ಹದಿನೈದು ವಾಕ್ಯಗಳಿಗೆ ಕಡಿಮೆಯಿಲ್ಲದಂತೆ ಪ್ರಬಂಧ ಬರೆಯಿರಿ.** **1 x 5 = 5**

**45. ಪ್ರಾಚ್ಯ ಸ್ಮಾರಕಗಳ ಸಂರಕ್ಷಣೆ** **ಜ್ಞಾನದೀಪ ಪುಟ ಸಂಖ್ಯೆ 246**

**ಪೀಠಿಕೆ :** ಪ್ರಾಚೀನ ಸ್ಮಾರಕಗಳು ರಾಷ್ಟ್ರ ಪರಂಪರೆಯ ಹೆಗ್ಗುರುತುಗಳು. ನಮ್ಮ ಭವ್ಯ ಪರಂಪರೆಯ ಪ್ರತೀಕಗಳಾಗಿವೆ. ಗತಕಾಲದ ವೈಭವಗಳನ್ನು ಅರಿಯಲು ಆಧಾರವಾಗಿರುವಂತಹ ಅಮೂಲ್ಯವಾದ ಸಂಪತ್ತು ಎಂದೇ ಹೇಳಬಹುದು.

**ವಿಷಯ ನಿರೂಪಣೆ :** ಪ್ರಾಚ್ಯ ಎಂದರೆ ಪ್ರಾಚೀನವಾದದ್ದು ಎಂದರ್ಥ. ಪ್ರಾಚೀನ ಕಾಲದಲ್ಲಿ ನಮ್ಮ ಹಿರಿಯರು ವಿಜಯದ ನೆನಪಿಗಾಗಿ ವಿಜಯ ಸ್ಮಾರಕಗಳು, ಅಥವಾ ಇನ್ನಾವುದಾದರೂ ಸ್ಮರಣೆಗೋಸ್ಕರ ದೇವಾಲಯಗಳು, ಸ್ತಂಭಗಳು, ಶಾಸನಗಳು, ಬಸದಿಗಳು, ಮಸೀದಿಗಳು, ಮಹಲ್ಗಳು, ಮೂರ್ತಿಗಳು, ಅರಮನೆಗಳು, ಕೋಟೆ–ಕೊತ್ತಲುಗಳನ್ನು ನಿರ್ಮಿಸಿದ್ದಾರೆ. ಇವೇ ನಮ್ಮ ಪ್ರಾಚ್ಯ ಸ್ಮಾರಕಗಳು. ಅವುಗಳನ್ನು ಸಂರಕ್ಷಣೆ ಮಾಡಿಕೊಂಡು ಹೋಗುವುದು ನಮ್ಮ ಹೆಗ್ಗಳಿಗೆ. ಯಾಕೆಂದರೆ ನಮ್ಮ ಪ್ರಾಚೀನರ ಜೀವನ ವ್ಯವಸ್ಥೆಗಳನ್ನು, ಇತಿಹಾಸ ಪರಂಪರೆಯನ್ನು ಅರಿಯಲು ಮೂಲಭೂತವಾದ ಆಕರವಾಗಿರುವಂತವು. ಭಾರತೀಯರು ಕಲೆ–ವಾಸ್ತುಶಿಲ್ಪಗಳಿಗೆ ಹೆಸರುವಾಸಿಯಾಗಿರುವಂತವರು. ಪ್ರಾಚೀನ ಭಾರತೀಯರು ಕಠಿಣಶ್ರಮವಹಿಸಿ ಭಾರತದ ಪ್ರಾಚೀನ ವಾಸ್ತುಶಿಲ್ಪಗಳನ್ನು ನಿರ್ಮಿಸಿದರು. ಆದರೆ ವಿದೇಶಿಯರು ಒಂದು ಕ್ಷಣಮಾತ್ರದಲ್ಲಿ ವಾಸ್ತುಶಿಲ್ಪಗಳನ್ನು ಕೆಡವಿ ಹಾಕಿದರು. ಮತ್ತೆ ಹಾಗಾಗಬಾರದು. ನಮ್ಮ ಗತಕಾಲದ ಜೀವನದ ಮೇಲೆ ಮುಂದಿನ ಜೀವನ ನಿಂತಿರುತ್ತದೆ. ಪ್ರಾಚೀನ ಸ್ಮಾರಕಗಳ ಆಧಾರದ ಮೇಲೆ ಅಂದಿನ ಜನರ ವೈಭವದ ಜೀವನ, ರಾಜಕೀಯ, ಸಾಂಸ್ಕೃತಿಕ, ಐತಿಹಾಸಿಕ ಅಂಶಗಳನ್ನು ತಿಳಿಯಬಹುದು. ಆದ್ದರಿಂದ ಅವುಗಳನ್ನು ರಕ್ಷಿಸಬೇಕು. ಕನ್ನಡ ನಾಡಿನಲ್ಲಿ ಹಂಪೆ, ಬಾದಾಮಿ, ಐಹೊಳೆ, ಪಟ್ಟದಕಲ್ಲು, ತಲಕಾಡು, ಶ್ರವಣಬೆಳಗೊಳ,

ಮೈಸೂರು, ಬೀದರ್, ಬಿಜಾಪುರ ಮುಂತಾದ ಕಡೆ ಪ್ರಾಚ್ಯ ಸ್ಮಾರಕಗಳನ್ನು ನೋಡಿದಾಗ ಅಂದಿನ ರಾಜ–ಮಹಾರಾಜರ ಇತಿಹಾಸ ಮತ್ತು ಕಲೆ, ಸಂಸ್ಕೃತಿಯನ್ನು ತಿಳಿಯಬಹುದು.

**ಉಪಸಂಹಾರ :** ಭಾರತೀಯರ ಸಂಸ್ಕೃತಿಯ ದ್ಯೋತಕವಾಗಿರುವ, ಐತಿಹಾಸಿಕ ಮಹತ್ವವನ್ನು ತಿಳಿಸುವ ಪ್ರಾಚೀನ ಕಾಲದ ಸ್ಮಾರಕಗಳನ್ನು ಸಂರಕ್ಷಿಸಿಕೊಂಡು ಹೋಗಬೇಕಾದದ್ದು ನಮ್ಮ ನಿಮ್ಮೆಲ್ಲರ ಜವಾಬ್ದಾರಿಯಾಗಿದೆ. ಪ್ರಾಚೀನ ಸ್ಮಾರಕಗಳು ನಮ್ಮ ನಾಡಿನ ಸಾಂಸ್ಕೃತಿಕ ಸಂಪತ್ತುಗಳನ್ನು ನಮ್ಮ ಮುಂದಿನ ಪೀಳಿಗೆಗೆ ತಿಳಿಸಿಕೊಡಲು ಅವುಗಳ ಸಂರಕ್ಷಣೆಯನ್ನು ಮಾಡಬೇಕಾದುದು ನಮ್ಮ ಆದ್ಯ ಕರ್ತವ್ಯವಾಗಬೇಕು.

ISM